ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003**

ಸಂಖ್ಯೆ: ಸಿ1/ಎಸ್‌ಎಸ್‌ಎಲ್‌ಸಿ/ಶಾ.ಸಂ/30/2023-24 ದಿನಾಂಕ: 21-08-2023

**:: ಸುತ್ತೋಲೆ ::**

**ವಿಷಯ:** ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ ನೂತನ ಶಾಲಾ ಸಂಕೇತ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವ ಬಗ್ಗೆ.

**ಉಲ್ಲೇಖ:** ಈ ಕಚೇರಿ ಸುತ್ತೋಲೆ ಸಂಖ್ಯೆ ಸಿ1/ಎಸ್.ಎಸ್.ಎಲ್.ಸಿ/ಶಾ.ಸಂ/2021/32 /2020-21, ದಿನಾಂಕ 10.02.2021.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಹೊಸದಾಗಿ ಪ್ರಾರಂಭಗೊಂಡ ಸರ್ಕಾರಿ, ಅನುದಾನಿತ ಮತ್ತು ಮಾನ್ಯತೆ ಪಡೆದ ಅನುದಾನ ರಹಿತ ಶಾಲೆಗಳು, ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ನೋಂದಾಯಿಸಲು ಮತ್ತು ಮಂಡಳಿಯೊಂದಿಗಿನ ಪತ್ರ ವ್ಯವಹಾರಗಳಿಗೆ ಅನುವಾಗುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ ಶಾಲಾ ಸಂಕೇತ ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಹೊಸ ಶಾಲಾ ಸಂಕೇತ ಪಡೆಯಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತಿದ್ದು,ಅದರಂತೆ ಹೊಸದಾಗಿ ಪ್ರಾರಂಭಗೊಂಡ ಸರ್ಕಾರಿ, ಅನುದಾನಿತ ಮತ್ತು ಮಾನ್ಯತೆ ಪಡೆದ ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರು **ನೂತನ ಶಾಲಾ ಸಂಕೇತ ಪಡೆಯಲು ಅರ್ಜಿಗಳನ್ನು ಆನ್‌ಲೈನ್ ಮೂಲಕ. ದಿನಾಂಕ: 01-09-2023** ರಿಂದ ಸಲ್ಲಿಸಬಹುದಾಗಿದ್ದು, ಇದಕ್ಕೆ ಸಂಬಂಧಿಸಿದ ವಿವರಗಳು ಈ ರೀತಿಯಾಗಿವೆ.

A) ಶಾಲಾ ಮುಖ್ಯ ಶಿಕ್ಷಕರು ಮಂಡಳಿಯ ವೆಬ್‌ಸೈಟ್ www.kseab.karnataka.gov.in ನ ಮೂಲಕ ನೂತನ ಶಾಲಾ ಸಂಕೇತಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ.

www.kseab.karnataka.gov.in → Online Services → SSLC → New School Code

B) ಶಾಲಾ ಮುಖ್ಯ ಶಿಕ್ಷಕರು ನೂತನ ಶಾಲಾ ಸಂಕೇತಕ್ಕೆ ಅರ್ಜಿ ಸಲ್ಲಿಸುವ ಮುನ್ನ ಈ ಕೆಳಕಂಡ ದಾಖಲೆಗಳನ್ನು 500 KB ಯಿಂದ 01 MB ಯೊಳಗೆ ಪಿ.ಡಿ.ಎಫ್ ಮಾದರಿ ಸ್ಕ್ಯಾನ್ ಮಾಡಿಟ್ಟುಕೊಳ್ಳುವುದು.

1. ಶಾಲಾ ಮಂಜೂರಾತಿ ಪ್ರತಿ
2. 2023-24ನೇ ಸಾಲಿನ ಶಾಲಾ ಮಾನ್ಯತೆ ನವೀಕರಣದ ಆದೇಶದ ಪ್ರತಿ

C) ಶಾಲಾ ಮುಖ್ಯ ಶಿಕ್ಷಕರು ಆನ್‌ಲೈನ್ ಅರ್ಜಿಯಲ್ಲಿ ಶಾಲಾ ಡೈಸ್‌ಕೋಡ್ (UDISE Code) ನಮೂದಿಸಿದಾಗ ಶಾಲಾ ವಿವರಗಳು ಶಾಲಾ SATS ಲಾಗಿನ್‌ನಲ್ಲಿದ್ದಂತೆ ಶಾಲೆಯ ಹೆಸರು, ವಿಳಾಸ, ಶಾಲೆಯ ವಿಧ, ಬೋಧನಾ ಮಾಧ್ಯಮದ ವಿವರಗಳು ತೆರೆದುಕೊಳ್ಳುತ್ತವೆ. ಈ ವಿವರಗಳಲ್ಲಿ ಯಾವುದೇ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಒಂದು ವೇಳೆ ಈ ವಿವರಗಳಲ್ಲಿ ಯಾವುದೇ ತಪ್ಪುಗಳಿದ್ದು, ತಿದ್ದುಪಡಿ ಮಾಡಲು ಇಚ್ಛಿಸಿದಲ್ಲಿ, ಮೊದಲು ಶಾಲಾ SATS ಲಾಗಿನ್‌ನಲ್ಲಿ ಸರಿಪಡಿಸಿ ನಂತರ ಅರ್ಜಿ ಸಲ್ಲಿಸುವುದು.

D) ಶಾಲಾ SATS ಲಾಗಿನ್‌ನಿಂದ fetch ಆಗುವ ವಿವರಗಳ ಹೊರತಾಗಿ ಮುಖ್ಯ ಶಿಕ್ಷಕರ ಹೆಸರು, ದೂರವಾಣಿ ಸಂಖ್ಯೆ ಮತ್ತು ಇತರ ವಿವರಗಳನ್ನು ನಮೂದಿಸುವುದು. ಅರ್ಜಿ ಸಲ್ಲಿಸಲು OTP Validation ನೀಡಿರುವುದರಿಂದ ಮತ್ತು ಅರ್ಜಿಗೆ ಸಂಬಂಧಿಸಿದ ಪ್ರಕ್ರಿಯೆ ವಿವರಗಳನ್ನು ಎಸ್.ಎಂ.ಎಸ್ ಮೂಲಕ ಅರ್ಜಿದಾರರಿಗೆ ರವಾನಿಸುವುದರಿಂದ ಚಾಲ್ತಿಯಲ್ಲಿರುವ ಮುಖ್ಯೋಪಾಧ್ಯಾಯರ ದೂರವಾಣಿ ಸಂಖ್ಯೆಯನ್ನೇ ನಮೂದಿಸುವುದು.

E) ಶಾಲೆಗೆ ಸಂಬಂಧಿಸಿದ ವಿವರಗಳನ್ನು ನಮೂದಿಸಿದ ನಂತರ ತಮ್ಮ ದೂರವಾಣಿ ಸಂಖ್ಯೆಗೆ ಬರುವಂತಹ OTPಯನ್ನು ನಮೂದಿಸಿ ಮೇಲೆ ತಿಳಿಸಿರುವ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಅರ್ಜಿಯನ್ನು Submit ಮಾಡುವುದು.

F) ಅರ್ಜಿಯನ್ನು Submit ಮಾಡಿದ ನಂತರ ನಿಗದಿಪಡಿಸಿರುವ ಶುಲ್ಕವನ್ನು ಆನ್‌ಲೈನ್‌ನಲ್ಲಿಯೇ ಸೃಜಿಸಿಕೊಂಡ ಚಲನ್ ಮೂಲಕ, ಇಲ್ಲವೇ ಆನ್‌ಲೈನ್ ಪೇಮೆಂಟ್ ಮೂಲಕ ಪಾವತಿಸಬಹುದಾಗಿದೆ.

G) ಶಾಲಾ ಮುಖ್ಯ ಶಿಕ್ಷಕರು ನೂತನ ಶಾಲಾ ಸಂಕೇತಕ್ಕಾಗಿ ಅರ್ಜಿ ಸಲ್ಲಿಸಿ, ನಿಗದಿತ ಶುಲ್ಕವನ್ನು ಪಾವತಿಸಿದ ನಂತರ ಅರ್ಜಿಗಳು ಆಯಾ ಜಿಲ್ಲೆಯ EO Loginನಲ್ಲಿ ಲಭ್ಯವಿದ್ದು ಸಂಬಂಧಿಸಿದ ನೋಡಲ್ ಅಧಿಕಾರಿಗಳು ಶಾಲಾ ವಿವರಗಳು ಮತ್ತು ಅಪ್‌ಲೋಡ್ ಮಾಡಿರುವ ದಾಖಲೆಗಳನ್ನು ಪರಿಶೀಲಿಸಿ, ಈ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರಿಂದ ಕಡತದಲ್ಲಿ ಅನುಮೋದನೆ ಪಡೆದು, ಎಲ್ಲಾ ದಾಖಲೆಗಳು ಸಮರ್ಪಕವಾಗಿದ್ದಲ್ಲಿ ಅರ್ಜಿಯನ್ನು ಮಂಡಳಿಗೆ Forward ಮಾಡುವುದು. ಇಲ್ಲವಾದಲ್ಲಿ ಸೂಕ್ತ ಕಾರಣಗಳೊಂದಿಗೆ Reject ಮಾಡುವುದು.

H) ಸಂಬಂಧಿಸಿದ ಜಿಲ್ಲಾ EO Login ಮೂಲಕ ಬಂದಂತಹ ಅರ್ಜಿಗಳನ್ನು ಮಂಡಳಿಯಲ್ಲಿ ಈ ಹಿಂದಿನಂತೆ ಪ್ರಕ್ರಿಯೆಗೊಳಿಸಿ ಶಾಲಾ ಸಂಕೇತವನ್ನು ನೀಡಲಾಗುವುದು ಮತ್ತು ಈ ಬಗ್ಗೆ ಅರ್ಜಿದಾರರಿಗೆ ಎಸ್.ಎಂ.ಎಸ್ ಮೂಲಕ ಮಾಹಿತಿ ರವಾನಿಸಲಾಗುವುದು.

ಈ ಮೇಲ್ಕಂಡಂತೆ ಸೂಚಿಸಿದ ರೀತಿಯಲ್ಲಿ ಆನ್‌ಲೈನ್‌ನಲ್ಲಿ ನೂತನ ಶಾಲಾ ಸಂಕೇತಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ. 2024ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಸಂಬಂಧಿಸಿದಂತೆ ಹೊಸದಾಗಿ ಪ್ರಾರಂಭಗೊಂಡ ಸರ್ಕಾರಿ, ಅನುದಾನಿತ ಮತ್ತು ಮಾನ್ಯತೆ ಪಡೆದ ಅನುದಾನ ರಹಿತ ಶಾಲೆಗಳು **ಶಾಲಾ ಸಂಕೇತ ಪಡೆಯಲು ದಿನಾಂಕ 30.10.2023 ಅಂತಿಮ ದಿನಾಂಕವಾಗಿರುತ್ತದೆ. ನೂತನ ಶಾಲಾ ಸಂಕೇತಕ್ಕಾಗಿ ಅರ್ಜಿಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕವೇ ಸಲ್ಲಿಸಲು ಮತ್ತೊಮ್ಮೆ ತಿಳಿಸಿದೆ.**

22/9/2023

(ಗೋಪಾಲಕೃಷ್ಣ ಹೆಚ್ ಎನ್)
ನಿರ್ದೇಶಕರು (ಪರೀಕ್ಷೆಗಳು)

ಅಗತ್ಯ ಕ್ರಮಕ್ಕಾಗಿ;
ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ರವರಿಗೆ.

**ಪ್ರತಿಗಳು:**

1. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
3. ಕಾರ್ಯದರ್ಶಿಗಳು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು, ರವರಿಗೆ ಮಾಹಿತಿಗಾಗಿ
4. ಸಹನಿರ್ದೇಶಕರು ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಮೈಸೂರು / ಬೆಳಗಾವಿ / ಕಲಬುರಗಿ ವಿಭಾಗ, ಇವರಿಗೆ ಮಾಹಿತಿಗಾಗಿ.
5. ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಬೆಂಗಳೂರು, ರವರಿಗೆ ಮಾಹಿತಿಗಾಗಿ
6. ಶಾಖಾಧಿಕಾರಿಗಳು, ಗಣಕ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಬೆಂಗಳೂರು, ರವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
7. ಮಂಡಳಿಯ ಎಲ್ಲಾ ಶಾಖೆಯ ಶಾಖಾಧಿಕಾರಿಗಳಿಗೆ ಮಾಹಿತಿಗಾಗಿ.